ಸ್ವಲ್ಪವಾಗಿ ಕಳಚಿ... ಅಯ್ಯೋ! ಅವನ ಕೈಗಳು! ಕೆಳಗೆ ಬಿದ್ದ ಅವನ ಕೈಗಳನ್ನು ತೆಗೆದುಕೊಂಡು ಮಕ್ಕಳು ಆಟವಾಡುತ್ತವೆ! ಎಲ್ಲರೂ ಅವನನ್ನು ನೋಡಿ ನಗುತ್ತಾರೆ. 'ಓ' ಎಂಬ ಅವರ ನಗು ಆ ವಿಶಾಲ ಪ್ರದೇಶದಲ್ಲಿ ಪ್ರತಿಧ್ವನಿಸುತ್ತದೆ.'

ಮೈಯನ್ನು ಟವಲಿನಿಂದ ಒರಸಿಕೊಂಡ ನಂತರ, ರಾಜಪ್ಪ ತನ್ನ ಕೈಗಳನ್ನು ದಿಟ್ಟಿಸಿ ನೋಡಿಕೊಂಡ. ಅವಕ್ಕೆ ಯಾವ ಆಪತ್ತು ಸಂಭವಿಸಿಲ್ಲ. ಭದ್ರವಾಗೇ ಇವೆ.

ಯಾತಕ್ಕಾಗಿ? ಅದೇ ಅವನಿಗೆ ಅರ್ಥವಾಗುತ್ತಿಲ್ಲ. ಈ ಕೈಗಳಿಂದ ದುಡಿದು ಅವನು ಸಂಪಾದನೆ ಮಾಡಿಲ್ಲ. ಹೊಟ್ಟೆ ಮಾತ್ರವೇ ದುಡಿಮೆ ಮಾಡುತ್ತಿದೆ. ಎಲ್ಲಿ ಮದುವೆ, ಎಲ್ಲಿ ತಿಥಿ ಎಂದು ಮನೆಗಳನ್ನು ಹುಡಿಕಿಕೊಂಡು ಹೋಗಿ ದುಡಿಯುತ್ತಿದೆ. ಕಳೆದ ಕೆಲವು ದಿನಗಳಿಂದ ಆ ಉದ್ಯೋಗಕ್ಕೂ ದಾರಿಯಿಲ್ಲದಾಯಿತು. ಊರಲ್ಲಿ ಮದುವೆಗಳೂ ನಡೆಯಲಿಲ್ಲ, ಜನಗಳೂ ಆರೋಗ್ಯವಾಗಿದ್ದಾರೆ.

ಕಳೆದ ವಾರ ಮೇಲಿನ ಬೀದಿ ಭಾಮಾ ಅಜ್ಜಿಯ ಪ್ರಾಣ ಹೋಗುತ್ತಿದೆ ಎಂದು ತಿಳಿದು ಅವನು ಅವಸರ ಅವಸರವಾಗಿ ಅಲ್ಲಿಗೆ ಓಡಿದ. ತುಟಿ ಹಿಚುಕಿಕೊಂಡು ಹೊರಬಂದ ಡಾಕ್ಟರನ್ನು ನೋಡಿ ಅವನು ನಂಬಿಕೆಯಿಂದಿದ್ದ. ಅಜ್ಜಿಗೆ ತೊಂಬತ್ತು ವಯಸ್ಸು ಎಂದರು. ಉಸಿರೆಳೆದಾಡುತ್ತಿತ್ತು. ಮುತ್ತೈದೆ ಸಾವು. ಉಳ್ಳವರ ಕುಟುಂಬ. ಹದಿನೈದು ದಿನಗಳ ಊಟಕ್ಕೇನೂ ಚಿಂತೆಯಿಲ್ಲ. ದೊರಕುವ ಹಣದಿಂದ ಅವನ ಮಗಳು ಮೈಥಿಲಿಗೆ ಸೀರೆ ಕೊಳ್ಳಲು ಸಾಕಾಗುವುದೇ ಎಂದು ಯೋಚಿಸುತ್ತಿದ್ದಾಗ, ಅಜ್ಜಿ ಕಣ್ಣು ತೆರೆದು ಪಿಳ ಪಿಳ ನೋಡುತ್ತಿದ್ದಳು. ಅಷ್ಟೇ. ಬಂದ ಯಮ ಹೆದರಿಕೊಂಡು ಓಡಿಹೋದ. ಪ್ರಾಯಶ್ಚಿತ್ತಕ್ಕೆ (ತಮಿಳು ಬ್ರಾಹ್ಮಣರಲ್ಲಿ ಹೀಗೆ ವೃದ್ಧರ ಸಾವು ಸಂಭವಿಸುವ ಮನೆಗಳಿಗೆ ಹೋದರೆ ದಾನವಾಗಿ ಸ್ವಲ್ಪ ಹಣ ಕೊಡುವ ಪದ್ಧತಿ ಇದೆ. ಅದಕ್ಕೆ ಪ್ರಾಯಶ್ಚಿತ್ತ ಅನ್ನುತ್ತಾರೆ) ಸಿಗುವ ಹಣ ಎಲೆ ಅಡಿಕೆ ಕೊಂಡುಕೊಳ್ಳಲು ಮಾತ್ರ ಸಾಕಾಗುತ್ತದೆ.

ರಾಜಪ್ಪ ದಿಣ್ಣೆಯಿಂದ ಕೆಳಗಿಳಿಯುತ್ತಾನೆ. ದಿಣ್ಣೆಯ ಅಂಚಿನಲ್ಲಿ ಮಲಗಿದ್ದ ಆರಮುದು ಎದ್ದು ದೇವಸ್ಥಾನದ ಕಾರ್ಯಗಳನ್ನು ಮಾಡಲು ಹೊರಟುಹೋದ. ಆರಮುದನನ್ನು ನೋಡಿದರೆ ಅಸೂಯೆಯಾಗುತ್ತದೆ. ಬ್ರಹ್ಮಚಾರಿ. ಬ್ರಹ್ಮಚಾರಿಯಾಗಿರಲು ಅವನ ದೇಹವೂ ಒಂದು ಕಾರಣ. ಆರಾಮಕುರ್ಚಿಯಂತೆ ಬಾಗಿದ ಶರೀರ, ಬೆನ್ನೂ ಹೊಟ್ಟೆಯೂ ಒಂದಕ್ಕೊಂದು ಅಂಟಿಕೊಂಡಿದ್ದವು. ಯಾವ ಹುಡುಗಿ ತಾನೇ ಇವನನ್ನು ನೋಡಿ ಮದುವೆಯಾಗಲು ಮುಂದಾಗುತ್ತಾಳೆ?

ರಾಜನಂತೆ ಇದ್ದಾನೆಂದು ಅವನಿಗೆ ರಾಜಪ್ಪ ಅಂತ ಹೆಸರಿಟ್ಟಿದ್ದರು. ಚಿಕ್ಕ ವಯಸ್ಸಿನಲ್ಲಿ ರಾಜನಂತೆಯೇ ಇದ್ದ. ಊಟ ಮಾಡಬೇಕೆಂದರೆ ಸಂಪಾದನೆ ಮಾಡಬೇಕೆಂಬ ಅರಿವೇ ಅವನಿಗೆ ಆಗ ಇರಲಿಲ್ಲ. ಶಾಲೆಯಲ್ಲಿ ನೆಟ್ಟಗೆ ಓದಿದ್ದರೆ ಯಾರನ್ನೂ ನಂಬಿ ಬದುಕು ಸಾಗಿಸಬೇಕಾದ ಪ್ರಮೇಯವೇ ಇರುತ್ತಿರಲಿಲ್ಲ. ಅಥವಾ, ಆರಂಭದಲ್ಲೇ ವೇದ ಅಧ್ಯಯನವಾದರೂ ಮಾಡಿರಬೇಕಿತ್ತು. ಉತ್ತರದಲ್ಲಿ ವೈದಿಕರಿಗೆ ಬಹಳ ಬೇಡಿಕೆ ಇದೆ ಎಂದು ದಿಲ್ಲಿಯಿಂದ ಬಂದ ಆ ನಾಚ್ಚಿಯಾರ್ ಗುಡಿಯ ಹುಡುಗ ಹೇಳಿದ್ದ. ಬ್ರಾಹ್ಮಣನಾಗಿ ಹುಟ್ಟಿ ಮಂತ್ರವೂ ಬರದೇ, ಬೇರೆ ಯಾವ ಕೆಲಸಕ್ಕೂ ಲಾಯಕ್ಕಿಲ್ಲ ಎಂದ ಮೇಲೆ ತನ್ನಂತೆ ಹೊಟ್ಟೆಯನ್ನೇ ಬಂಡವಾಳವಾಗಿಸಿ ಕೊಂಡು ಬದುಕುವುದಕ್ಕಿಂತ ಬೇರೆ ದಾರಿ ಏನಿದೆ.

ಅವನ ತಮ್ಮ ಓದಿ ಈ ಊರಿನಲ್ಲೇ ಎಲ್.ಐ.ಸಿ.ಯಲ್ಲಿ ಕೆಲಸದಲ್ಲಿದ್ದಾನೆ. ಅವನಿಗೆ ನಾಲ್ಕು ಹೆಣ್ಣು ಮಕ್ಕಳು. ಎರಡು ವರ್ಷಗಳ ಹಿಂದಿನವರೆಗೂ, ಅಮ್ಮ ಜೀವಂತವಾಗಿದ್ದಾಗ, ಒಟ್ಟಿಗೆ ಇದ್ದವರು. ಶುಭಸ್ವೀಕಾರ ಮುಗಿದ ಮಾರನೇಯ ದಿನವೇ ತಮ್ಮ ಹೇಳಿಬಿಟ್ಟ: 'ನೋಡು, ರಾಜಪ್ಪ, ನನಗೂ ನಾಲ್ಕು ಹೆಣ್ಣು ಮಕ್ಕಳು. ನಾವು ಒಟ್ಟಾಗಿ ಇರೋದು ಸಾಧ್ಯವಿಲ್ಲ. ಮಧ್ಯದ ಭಾಗವನ್ನ ನೀನು ತಗೋ! ಒಂದು ಕೋಣೆ ಸಾಕಾಗುತ್ತೇ ಅಂತ ಲೆಕ್ಕಾಚಾರ ಹಾಕಿದ್ರೆ, ನಿನಗೇ ಗೊತ್ತು, ಏನೋ ಅಮ್ಮ ಇದ್ರು, ನಿನ್ನ ಬಂಡಿ ಓಡ್ತಿತ್ತು. ಎಷ್ಟು ದಿನಾಂತ ನೀನು ಹೀಗೆ ಜವಾಬ್ದಾರಿ ಇಲ್ದೇ ಇರ್ಲಿಕ್ಕೆ ಸಾಧ್ಯ? ನಿನ್ನ